ದಿನಾಂಕಃ 13.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ವಾದಿ ಪರ ಶ್ರೀ. ಎಮ್. ವೈ ಜೆ ವಕೀಲರಿಂದಃ**

ನಾನು ಬಿ.ಎ ಪದವೀಧರ. 1 ಮತ್ತು 2 ನೇ ಪ್ರತಿವಾದಿಯರು ನನ್ನ ತಂದೆ ತಾಯಿ. 4 ನೇ ಪ್ರತಿವಾದಿ ನನ್ನ ತಮ್ಮ. ನಮ್ಮ ತಂದೆ ತಾಯಿಗೆ ನಾವು ಒಟ್ಟು 03 ಜನ ಮಕ್ಕಳು. ವಾದಿ ದಾವಾ ಆಸ್ತಿಗಳಲ್ಲಿ ತನ್ನ ಹಿಸ್ಸೆಯನ್ನು ಕೇಳಿ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾಳೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ದಾವಾ ಆಸ್ತಿಗಳಲ್ಲಿ ಪಾಲು ವಾಟ್ನಿಯಾಗಿರುವುದಿಲ್ಲ ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಮನೆಗಳಲ್ಲಿ ಪಾಲು ವಾಟ್ನಿಯಾಗಿದ್ದು, ಜಮೀನುಗಳಲ್ಲಿ ಪಾಲು ವಾಟ್ನಿಯಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ನಾನು ಹೇಳಿ ಬರೆಸಿರುವುದಿಲ್ಲ.

ವಾದಿಯು ದಾವಾ ಆಸ್ತಿಗಳಲ್ಲಿ ತನ್ನ ಹಿಸ್ಸೆಯನ್ನು ಪ್ರತ್ಯೇಕವಾಗಿ ವಿಭಜಿಸಿ ಕೊಡಲು ಕೇಳಿದ್ದು, ನಾನು ಮತ್ತು ಉಳಿದ ಪ್ರತಿವಾದಿಯರು ನಿರಾಕರಿಸಿದ್ದರಿಂದ, ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತಾಳೆಂದರೆ ಸರಿಯಲ್ಲ. ಮನೆಗಳಲ್ಲಿ ಪಾಲು ವಾಟ್ನಿ ಮಾಡಿಕೊಳ್ಳುವ ಕಾಲಕ್ಕೆ ವಾದಿಗೆ ತಿಳಿಸಿರುತ್ತೇವೆ. ಸದರಿ ಪಾಲು ವಾಟ್ನಿ ಪತ್ರಕ್ಕೆ ವಾದಿಯ ಸಹಿಯನ್ನು ಪಡೆದುಕೊಂಡಿರುತ್ತೀರಾ? ಎಂದರೆ ಸಾಕ್ಷಿಯು ಬಾಯಿ ಮಾತಿನ ಪಾಲು ವಾಟ್ನಿಯಾಗಿರುತ್ತದೆಂದು ನುಡಿಯುತ್ತಾರೆ. ವಾದಿಗೆ ದಾವಾ ಆಸ್ತಿಗಳಲ್ಲಿ ಪಾಲು ಕೊಡಬಾರದೆಂಬ ಉದ್ದೇಶದಿಂದ ಸುಳ್ಳು ಸಂಗತಿಗಳುಳ್ಳ ಪ್ರತಿವಾದ ಪತ್ರವನ್ನು ಸಲ್ಲಿಸಿ, ಆ ದಿಶೆಯಲ್ಲಿ ಸುಳ್ಳು ಮುಖ್ಯ ವಿಚಾರಣೆಯ ಪ್ರಮಾಣಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ- 1 ಮತ್ತು 2 ನೇ ಪ್ರತಿವಾದಿಯರ ಪರ ಶ್ರೀ. ಎ. ಎಸ್. ಕೆ ವಕೀಲರಿಂದಃ-**

ನಾನು ಸನ್ 2019 ರಿಂದ ಜರಾಕ್ಸ ಅಂಗಡಿಯನ್ನು ನಡೆಸುತ್ತಿದ್ದೇನೆ. ಅದಕ್ಕಿಂತ ಪೂರ್ವದಲ್ಲಿ ನಾನು ಮೂರುವರೆ ವರ್ಷಗಳ ಕಾಲ ಪಂಚಾಯತಿಯಲ್ಲಿ ಗುತ್ತಿಗೆಯ ಆಧಾರದ ಮೇಲೆ ಕಂಪ್ಯೂಟರ ಆಪರೇಟರ್ ಅಂತಾ ಕೆಲಸ ನಿರ್ವಹಿಸುತ್ತಿದ್ದೆ. ನಂತರ ನಾನು ಅರಿಹಂತ ಟ್ರೇಡಿಂಗ್ ಕಂಪನಿಯಲ್ಲಿ ಸುಮಾರು 08 ವರ್ಷಗಳ ಕಾಲ ಅಕೌಂಟಂಟ ಕಮ ಕ್ಲರ್ಕ ಅಂತಾ ಕೆಲಸ ನಿರ್ವಹಿಸಿರುತ್ತೇನೆ. ನಾನು ಮೇಲೆ ಹೇಳಿದ ಎಲ್ಲಾ ನೌಕರಿಗಳನ್ನು ನಾನು ಮದುವೆಯಾದ ನಂತರ ಮಾಡಿರುತ್ತೇನೆ.

ನನ್ನ ಮದುವೆಯು ಸನ್ 2007 ರಲ್ಲಿ ಆಗಿರುತ್ತದೆ. ಮದುವೆಯಾದ ನಂತರ ನಾನು ಕೇವಲ 01 ವರ್ಷ ಕಾಲ ನನ್ನ ತಂದೆ ತಾಯಿ ಜೊತೆ ವಾಸವಾಗಿದ್ದೆ ಎಂದರೆ ಸಾಕ್ಷಿಯು 02 ವರ್ಷಗಳ ಕಾಲ ವಾಸವಾಗಿದ್ದೆನು ಎಂದು ನುಡಿಯುತ್ತಾರೆ. ಸಾಕ್ಷಿ

ಮುಂದುವರೆದು ನನ್ನ ತಮ್ಮ ಜಗಳ ಮಾಡಿ ಹೊರಗೆ ಹಾಕಿದ್ದರಿಂದ ನಾನು ನನ್ನ ಹೆಂಡತಿಯ ಜೊತೆ ಪ್ರಕಾಶ ಗಸ್ತಿಯವರ ಮನೆಯಲ್ಲಿ ಬಾಡಿಗೆ ತರೀಖವಾಗಿ ವಾಸವಾಗಿದ್ದೆನು. ಒಂದೂವರೆ ವರ್ಷಗಳ ಕಾಲ ಅವರ ಮನೆಯಲ್ಲಿ ವಾಸವಾಗಿದ್ದು, ನಂತರ ಬಾಲನಾಯಕರವರ ಮನೆಯಲ್ಲಿ ನಾಲ್ಕೂವರೆ ವರ್ಷಗಳ ಕಾಲ ವಾಸವಾಗಿದ್ದೇವು. ಆ ಸಮಯದಲ್ಲಿ ನಮ್ಮ ಮನೆಯ ಬಾಡಿಗೆಯನ್ನು ನನ್ನ ತಂದೆ ತಾಯಿ ಕೊಡುತ್ತಿದ್ದರು ಎಂದರೆ ಸಾಕ್ಷಿಯು ಹೊಲದಿಂದ ಬಂದ ಆದಾಯದಿಂದ ಮನೆ ಬಾಡಿಗೆಯನ್ನು ಮಾತ್ರ ಕೊಡುತ್ತಿದ್ದರು ಎಂದು ನುಡಿಯುತ್ತಾರೆ.

ಸದರಿ ಹೊಲ ನಮ್ಮ ತಂದೆಯ ಹೆಸರಿಗೆ ಇರುತ್ತದೆ. ಸದರಿ ಹೊಲ ಮೂಲತಃ ನಮ್ಮ ಅಜ್ಜನಿಗೆ ಸರಕಾರದಿಂದ ಮಂಜೂರು ಆಗಿರುತ್ತದೆ. ನಮ್ಮ ಅಜ್ಜನಿಗೆ ಒಟ್ಟು 04 ಜನ ಮಕ್ಕಳು. ಆ ಪೈಕಿ ನಮ್ಮ ತಂದೆಯವರೇ ಹಿರಿಯರು ಎಂದರೆ ನಿಜ. ನನ್ನ ತಂದೆ ಸನ್ 1966 ರಲ್ಲಿ ಪೊಲೀಸ್ ಇಲಾಖೆಗೆ ಸೇರಿಕೊಂಡಿರುತ್ತಾರೆಂದರೆ ನಿಜ. ಸನ್ 1966 ರಿಂದ ಸನ್ 2005 ರವರೆಗೆ ಅವರು ಬೇರೆ ಬೇರೆ ಕಡೆಯಲ್ಲಿ ಸೇವೆ ಸಲ್ಲಿಸುತ್ತಾ ಹೊರಗಡೆ ಇದ್ದರು ಎಂದರೆ ನಿಜ.

ನಮ್ಮ ತಂದೆಯ ಮೂಲ ಊರು ಹುಕ್ಕೇರಿ ತಾಲ್ಲೂಕಿನ ಬೆಲ್ಲದ ಬಾಗೇವಾಡಿ. ನಮ್ಮ ತಂದೆ ಬೇರೆ ಬೇರೆ ಕಡೆ ಸೇವೆ ಸಲ್ಲಿಸುತ್ತಾ ಹೊರಗಡೆ ಇದ್ದುದರಿಂದ ಜಮೀನನ್ನು ನಮ್ಮ ತಂದೆಯ ಸಹೋದರರು ನೋಡಿಕೊಳ್ಳುತ್ತಿದ್ದರು ಎಂದರೆ ನಿಜ. ಸಾಕ್ಷಿ ಮುಂದುವೆರದು ನಮ್ಮ ತಂದೆ ನಿವೃತ್ತಿಯಾಗುವುದಕ್ಕಿಂತ ಎರಡು ವರ್ಷಗಳ ಮುಂಚೆ ಆತನ ಸಹೋದರರು ನನ್ನ ತಂದೆಯ ಪಾಲಿನ ಜಮೀನನ್ನು ಬಿಟ್ಟುಕೊಟ್ಟಿರುತ್ತಾರೆ. ಆ ಬಗ್ಗೆ ದಾಖಲೆಗಳು ಇರುವುದಿಲ್ಲ.

ಸನ್ 2014 ರಲ್ಲಿ ನನ್ನ ತಂದೆಯ ಸಹೋದರರು ಹುಕ್ಕೇರಿ ನ್ಯಾಯಾಲಯದಲ್ಲಿ ಪಾಲು ವಾಟ್ನಿ ದಾವೆ ಸಲ್ಲಿಸಿದ್ದರು ಎಂದರೆ ನಿಜ. ಸದರಿ

ದಾವೆಯಲ್ಲಿ ಅಪಸಾತ ಮಾಡಿಕೊಂಡು ಅದರ ಪ್ರಕಾರ ನಮ್ಮ ತಂದೆಗೆ ಆತನ ಸಹೋದರರು ಜಮೀನನ್ನು ಬಿಟ್ಟು ಕೊಟ್ಟಿರುತ್ತಾರೆಂದರೆ ನಿಜ. ಜಮೀನಿನಿಂದ ವರ್ಷಕ್ಕೆ 40 ರಿಂದ 50 ಲಕ್ಷ ರೂ.ಗಳ ಆದಾಯ ಬರುತ್ತದೆಂದು ತೋರಿಸಲು ದಾಖಲೆಗಳು ಇರುವುದಿಲ್ಲ. ಸನ್ 2019 ರಲ್ಲಿ ನನ್ನ ಸಹೋದರ 4 ನೇ ಪ್ರತಿವಾದಿಯ ಆದಾಯ ಮಾಸಿಕ 21 ಸಾವಿರ ರೂ. ಇರುತ್ತದೆಂದರೆ ಸರಿಯಲ್ಲ.

ನನ್ನ ತಂದೆ ಸುಮಾರು 37 ವರ್ಷಗಳ ಕಾಲ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದರಿಂದ ಅವರು ಒಳ್ಳೆಯ ಸಂಬಳ ಪಡೆಯುತ್ತಿದ್ದರು ಅಲ್ಲದೇ ಉಳಿತಾಯವನ್ನು ಸಹ ಚೆನ್ನಾಗಿ ಮಾಡಿದ್ದರು ಎಂದರೆ ನಿಜ. ಸಾಕ್ಷಿ ಮುಂದುವರೆದು ಅವರಿಗೆ ಆರೋಗ್ಯ ಸರಿ ಇಲ್ಲದೇ ಇರುವ ಕಾರಣ ಚಿಕಿತ್ಸೆಗಾಗಿ ಸಾಕಷ್ಟು ಖರ್ಚು ಮಾಡಿರುತ್ತಾರೆಂದು ನುಡಿಯುತ್ತಾರೆ. ಸದರಿ ಸಂಗತಿಯನ್ನು ನನ್ನ ಪ್ರತಿವಾದ ಪತ್ರದಲ್ಲಾಗಲೀ, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿಯಾಗಲೀ ಹೇಳಿರುವುದಿಲ್ಲ ಎಂದರೆ ನಿಜ. ನನ್ನ ತಂದೆ ಹೃದಯ ಖಾಯಿಲೆಯಿಂದ ಬಳಲುತ್ತಿದ್ದರು. ಅವರಿಗೆ ಕೆಎಲ್ ಇ ಆಸ್ಪತ್ರೆಯಲ್ಲಿ ಸನ್ 2013 ಅಥವಾ ಸನ್ 2014 ರಲ್ಲಿ ಎಂಜೋ ಪ್ಲಾಸ್ಟರ ಮಾಡಿಸಿರುತ್ತಾರೆ. ದಾವಾ ಆಸ್ತಿ ಅನುಕ್ರಮ ಸಂಖ್ಯೆ 3 ರಿಂದ 5 ನೇದ್ದವುಗಳನ್ನು ಸನ್ 2005 ರಲ್ಲಿ ಖರೀದಿಸಿದ್ದು, ಆ ಸಮಯದಲ್ಲಿ ನಮ್ಮ ತಂದೆಗೆ ಹಣಕಾಸಿನ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಮ್ಮ ತಂದೆಗೆ ಬಹಳ ದಿನಗಳಿಂದ ಬಿಪಿ ಖಾಯಿಲೆ ಇತ್ತು ಎಂದು ನುಡಿಯುತ್ತಾರೆ. ಸರಕಾರಿ ಇಲಾಖೆಯಲ್ಲಿ ನಿರ್ವಹಿಸುವಾಗ ಆಸ್ಪತ್ರೆಯ ಚಿಕಿತ್ಸೆಯ ವೆಚ್ಚವನ್ನು ಸರಕಾರವೇ ಭರಿಸುತ್ತದೆಂದರೆ ಸರಿಯಲ್ಲ. ಸದರಿ ಮೇಲೆ ಹೇಳಿದ ದಾವಾ ಆಸ್ತಿ ಅನುಕ್ರಮ ಸಂಖ್ಯೆ 3 ರಿಂದ 5 ನೇದ್ದವುಗಳನ್ನು 1 ನೇ ಪ್ರತಿವಾದಿ ತನ್ನ ಸ್ವಂತ ಆದಾಯದಿಂದ ಖರೀದಿಸಿದ್ದು, ಆತನ ಸ್ವಯಾರ್ಜಿತ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ.

ನಾನು ಯಾವ ಕಂಪನಿಯಲ್ಲಿ ಎಷ್ಟು ವರ್ಷಗಳ ಕಾಲ ನೌಕರಿ ಮಾಡಿದ್ದೇನೆ ಹಾಗೂ ಎಷ್ಟು ಸಂಬಳ ಪಡೆದಿರುತ್ತೇನೆ ಹಾಗೂ ಎಷ್ಟು ಉಳಿತಾಯ ಮಾಡಿರುತೇನೆಂದು ತೋರಿಸಲು ನನ್ನ ಬಳಿ ದಾಖಲೆಗಳು ಇರುವುದಿಲ್ಲ. 1 ನೇ ಪ್ರತಿವಾದಿ ತನ್ನ ಪರವಾಗಿ ಏನು ದಾಖಲೆಗಳನ್ನು ಹಾಜರುಪಡಿಸಿರುತ್ತಾನೆಂದು ನಾನು ನೋಡಿರುವುದಿಲ್ಲ. ದಾವಾ ಆಸ್ತಿ ಗಳು ನನ್ನ ಹೆಸರಿಗೆ ಯಾವ ನಾತೆಯಿಂದ ದಾಖಲಾಗಿರುತ್ತವೆ ಎಂದರೆ ಸಾಕ್ಷಿಯು ನನ್ನ ತಂದೆ ಮಾಡಿದ್ದು ಹೇಗೆ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ಪಂಚಾಯತಿಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ಪಂಚಾಯತಿ ಅಧಿಕಾರಿಗಳೊಂದಿಗೆ ಮಿಲಾಪಿಯಾಗಿ ದಾವಾ ಆಸ್ತಿಗಳಿಗೆ ನನ್ನ ಹೆಸರನ್ನು ದಾಖಲಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಿಡಿ.7 ರಂತೆ ದಾಖಲೆಯನ್ನು ಹಾಜರುಪಡಿಸಿದ್ದು, ದಾವಾ ಆಸ್ತಿಗಳು ನನ್ನ ಹೆಸರಿಗೆ ಯಾವ ಆಧಾರದ ಮೇಲೆ ದಾಖಲು ಆಗಿರುತ್ತವೆ ಎಂದು ಯಾವುದೇ ದಾಖಲೆಗಳು ಲಭ್ಯ ಇರುವುದಿಲ್ಲ ಎಂದರೆ ಸರಿಯಲ್ಲ.

ನನ್ನಂತೆ 4ನೇ ಪ್ರತಿವಾದಿಗೆ ನನ್ನ ತಂದೆ ಯಾವ ಆಸ್ತಿಯನ್ನು ಬಿಟ್ಟುಕೊಟ್ಟಿರುತ್ತಾರೆಂದರೆ ಸಾಕ್ಷಿಯು ನಮ್ಮ ತಂದೆಗೆ ಆರೋಗ್ಯ ಸರಿ ಇಲ್ಲದೇ ಇರುವ ಕಾರಣ ಆತನ ಹೆಸರಿಗೆ ಆಸ್ತಿಯನ್ನು ಮಾಡಿರುವುದಿಲ್ಲ ಆದರೆ 4 ನೇ ಪ್ರತಿವಾದಿ ನನ್ನ ಜೊತೆ ಜಗಳ ತೆಗೆದು ಮನೆಯಿಂದ ಹೊರಗೆ ಹಾಕಿದ್ದರಿಂದ ಹಿರಿಯರ ಸಲಹೆಯಂತೆ ನನಗೆ ನಮ್ಮ ತಂದೆ ಬಿಟ್ಟುಕೊಟ್ಟಿದ್ದ ಆಸ್ತಿಗಳಲ್ಲಿ ಅರ್ಧ ಹಿಸ್ಸೆಯನ್ನು 4 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ಆ ರೀತಿ ನಾನು ಸೃಷ್ಟಿಸಿಕೊಂಡು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಸನ್ 2022 ರಲ್ಲಿ ನಾನು 2 ಮತ್ತು 4 ನೇ ಪ್ರತಿವಾದಿಯರ ವಿರುದ್ಧ ವಾಟ್ನಿ ಮತ್ತು ಮನಾಯಿ ದಾವೆಯನ್ನು ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ

ನಂಬರ 54/2022 ನೇದ್ದನ್ನು ಸಲ್ಲಿಸಿದ್ದೆನು ಎಂದರೆ ಸಾಕ್ಷಿಯು 4 ನೇ ಪ್ರತಿವಾದಿ ನನಗೆ ರಸ್ತೆ ಬಿಡಲು ತಕರಾರು ಮಾಡಿದ್ದರಿಂದ ಸದರಿ ದಾವೆಯನ್ನು ದಾಖಲಿಸಿದ್ದೆ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಮದ್ಯಂತರ ಅರ್ಜಿಯಂತೆ ಮನಾಯಿ ಆದೇಶವಾಗಿರುವುದಿಲ್ಲ ಎಂದರೆ ನಿಜ. ಸದರಿ ದಾವೆ ಚಾಲ್ತಿಯಲ್ಲಿರುವಾಗಲೇ ಮತ್ತೊಂದು ಅಸಲು ದಾವೆ ಸಂಖ್ಯೆ 240/2022 ನೇದ್ದನ್ನು ದಾಖಲಿಸಿರುತ್ತೇನೆಂದರೆ ಸಾಕ್ಷಿಯು 4 ನೇ ಪ್ರತಿವಾದಿ ರಸ್ತೆಗೆ ಮತ್ತೆ ತಕರಾರು ಮಾಡಿದ್ದರಿಂದ ಸದರಿ ದಾವೆಯನ್ನು ದಾಖಲಿಸಿರುತ್ತೇನೆಂದು ನುಡಿಯುತ್ತಾರೆ. ಸದರಿ ದಾವೆಯೂ ವಿಚಾರಣೆಗಾಗಿ ಬಾಕಿ ಇರುತ್ತದೆಂದರೆ ನಿಜ. ಇದಾದ ನಂತರ ನನ್ನ ಹೆಂಡತಿಯು 1 ಮತ್ತು 4 ನೇ ಪ್ರತಿವಾದಿಯರ ವಿರುದ್ಧ ದೂರನ್ನು ನೀಡಿರುತ್ತಾಳೆಂದರೆ ಸಾಕ್ಷಿಯು 4 ನೇ ಪ್ರತಿವಾದಿ ನನಗೆ ಮತ್ತು ನನ್ನ ಹೆಂಡತಿಗ ಹಲ್ಲೆ ಮಾಡಿದ್ದು, 1 ಮತ್ತು 2 ನೇ ಪ್ರತಿವಾದಿಯರು ಆತನಿಗೆ ಕುಮ್ಮಕ್ಕು ನೀಡಿದ್ದರಿಂದ ನನ್ನ ಹೆಂಡತಿ ಅವರ ಮೇಲೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾಳೆಂದು ನುಡಿಯುತ್ತಾರೆ. ಅದಕ್ಕಿಂತ ಪೂರ್ವದಲ್ಲಿ ಅವರು ನನ್ನ ಹಾಗೂ ನನ್ನ ಹೆಂಡತಿಯ ವಿರುದ್ಧ ದೂರನ್ನು ಕೊಟ್ಟಿದ್ದರು ಎಂಂದರೆ ಸಾಕ್ಷಿಯು ನನ್ನ ಹೆಂಡತಿ ದೂರನ್ನು ನೀಡಿದ್ದರಿಂದ ಪ್ರತಿಯಾಗಿ ಅವರು ನಮ್ಮ ವಿರುದ್ಧ ಮತ್ತೊಂದು ದೂರನ್ನು ನೀಡಿರುತ್ತಾರೆಂದು ನುಡಿಯುತ್ತಾರೆ. ನನ್ನ ಹೆಂಡತಿ 1ನೇ ಪ್ರತಿವಾದಿಯ ಪೆನಶನ್ ಹಣದಲ್ಲಿ ಅರ್ಧ ಭಾಗವನ್ನು ಕೊಡಬೇಕೆಂದು ಅತನ ವಿರುದ್ಧ ದೂರನ್ನು ಕೊಟ್ಟಿರುತ್ತಾಳೆಂದರೆ ಸರಿಯಲ್ಲ. ದಾವಾ ಆಸ್ತಿ ಅನುಕ್ರಮ ಸಂಖ್ಯೆ 3 ರಿಂದ 5 ನೇದ್ದವುಗಳು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಇರುತ್ತವೆ ಎಂದು ನನಗೆ ಗೊತ್ತಿದ್ದರೂ ಸಹ ಹೇಗಾದರೂ ಮಾಡಿ ಸದರಿ ಆಸ್ತಿಯಲ್ಲಿ ಪಾಲು ಪಡೆಯಬೇಕೇಂದು ಸುಳ್ಳು ಸಂಗತಿಗಳುಳ್ಳ ಪ್ರತಿವಾದ ಪತ್ರ ಸಲ್ಲಿಸಿ, ಆ ದಿಶೆಯಲ್ಲಿ ಸುಳ್ಳು ಮುಖ್ಯ ವಿಚಾರಣೆಯ ಪ್ರಮಾಣಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

4 ನೇ ಪ್ರತಿವಾದಿಯು ಇನ್ನೂ ಮದುವೆಯಾಗಿರುವುದಿಲ್ಲ ಎಂದರೆ ನಿಜ. ಆತ ಮದುವೆ ಮಾಡಿಕೊಂಡರೆ ದಾವಾ ಆಸ್ತಿಗಳಲ್ಲಿ ಅರ್ಧ ಹಿಸ್ಸೆ ಹೋಗುತ್ತದೆಂದು ತಿಳಿದು ದಾವಾ ಆಸ್ತಿಗಳನ್ನು ನಾನೊಬ್ಬನೇ ಪಡೆಯಬೇಕೆಂಬ ಉದ್ದೇಶದಿಂದ ನನ್ನ ತಂದೆ ತಾಯಿ ಹಾಗೂ 4 ನೇ ಪ್ರತಿವಾದಿ ವಿರುದ್ಧ ಸುಳ್ಳು ದೂರನ್ನು ಹಾಗೂ ದಾವೆಗಳನ್ನು ಸಲ್ಲಿಸುತ್ತಾ ಬಂದಿರುತ್ತೇನೆಂದರೆ ಸರಿಯಲ್ಲ. ಸನ್ 2014 ರಲ್ಲಿ ಪಾಲು ವಾಟ್ನಿ ದಾವೆ ಆಗುವುದಕ್ಕಿಂತ ಮುಂಚೆ ಜಮೀನಿನಿಂದ ಬಂದ ಉತ್ಪನ್ನದ್ದ ಬಗ್ಗೆಯಾಗಲೀ, ನಾನು ದುಡಿದು ನನ್ನ ತಂದೆಯ ಕೈಯಲ್ಲಿ ಕೊಟ್ಟ ಆದಾಯದ ಬಗ್ಗೆಯಾಗಲೀ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆಯ ಸಹೋದರರ ಪೈಕಿ ಅಶೋಕ ಎಂಬ ಹೆಸರಿನ ಚಿಕ್ಕಪ್ಪ ಬದುಕಿದ್ದಾನೆ. ಸದರೀಯವರನ್ನು ನನ್ನ ಪರವಾಗಿ ಸಾಕ್ಷಿ ಮಾಡುತ್ತೀರಾ? ಎಂದರೆ ಸಾಕ್ಷಿಯು ಅವರು ನನ್ನ ತಂದೆಯ ಅಣತಿಯಂತೆ ನಡೆದುಕೊಳ್ಳುವುದರಿಂದ ಅವರು ನಾನು ಕರೆದರೆ ಬರುವುದಿಲ್ಲ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ